ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈಗಾಗಲೇ ಇದರ ಬಗ್ಗೆ ಬೇರೆ ಪ್ರದೇಶಗಳಲ್ಲಿ ಏನೇನೆ ಬೆಳಗಳಿವೆ ಅವನ್ನೆಲ್ಲ ತರಿಸಲಾಗಿದೆ. ಆಗತ್ಯ ಪದಾರ್ಥಗಳ ನಿಯಮ ೧೯೫೦ರ ಪ್ರಕಾರ ನಮ್ಮ ರಾಜ್ಯದಲ್ಲೂ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಬೈರೇಗೌಡ —ಕೋಳಿಗೆ ಬೇಕಾದ ಮೇವು, ಔಷಧಿಗಳಿಗೆಲ್ಲ ಬೆಲೆ ಹೆಚ್ಚಾಗಿರುವುದರಿಂದ ಅದಕ್ಕೆ ಅನುಗುಣವಾಗಿ ಕೋಳಿ ಮೊಟ್ಟೆ ಬೆಲೆ ಹೆಚ್ಚಾಗದೆ ಇರುವ ಕಾರಣ ಕೋಳಿ ಸಾಕಣೆ ಮಾಡುತ್ತಿರುವವರು ಆ ಕಸಬನ್ನು ಬಿಡುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಖರ್ಚಿಗೆ ಅನುಗುಣವಾಗಿ ಬೆಲೆ ಸಿಗುವಂತೆ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೆ?

ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್.—ಆ ವಿಷಯ ಬೇರೆ ಆಯಿತು. ಅದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಬೇಕು.

ನ್ಯಾಯ ಬೆಲೆಯಲ್ಲಿ ರೈತರಿಗೆ ಬೀಜಗಳನ್ನು ಒದಗಿಸುರುವ ಬಗ್ಗೆ.

೧೭೫. ಶ್ರೀ ಬಿ. ಆರ್. ಪಾಟೀಲ್ (ಅಳಂದ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರೈತರಿಗೆ ಬಿತ್ತುವ ಬೀಜಗಳು ಬೇರೆ ರಾಜ್ಯಗಳಿಗಿಂತ ಹೆಚ್ಚಿನ ಬೆಲೆಯಲ್ಲಿ ದೊರೆಯುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರ ರೈತರಿಗೆ ನ್ಯಾಯ ಬೆಲೆಯಲ್ಲಿ ಮತ್ತು ರಿಯಾಯಿತಿದರಗಳಲ್ಲಿ ಬಿತ್ತುವ ಬೀಜಗಳನ್ನು ಸರಬರಾಜು ಮಾಡುವ ಬಗ್ಗೆ ಕೈ ಕೊಂಡ ಕ್ರಮವೇನು?

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ, ಒಳ್ಳೆಯ ಬೀಜಗಳನ್ನು ಕೃಷಿ ಕರ್ನಾಟಕ ರಾಜ್ಯ ಬೀಜ ನಿಗಮ ಹಾಗೂ ಕರ್ನಾಟಕ ರಾಜ್ಯ ಕೃಷಿ ಕೈಗಾರಿಕ ನಿಗಮ ಇವುಗಳ ಮೂಲಕ ಒದಗಿಸಲಾಗುತ್ತಿದೆ.

ಶ್ರೀ ಬಿ. ಆರ್. ಪಾಟೀಲ್.—ವಿಶೇಷವಾಗಿ ಮಹಾರಾಷ್ಟ್ರ ಬಾರ್ಡರ್‌ನಲ್ಲಿ ಬೇರೆ ರಾಜ್ಯಗಳಿಂದ ಬಂದಂಥ ಬೀಜಗಳನ್ನು ಮಾರಾಟ ಮಾಡುತ್ತಾರೆ. ಆದು ನಮ್ಮ ಬೀಜ ನಿಗಮಕ್ಕಿಂತ ಬಹಳ ಅಗ್ಗವಾಗಿ ಸಿಗುತ್ತದೆ; ಅದಕ್ಕೋಸ್ಕರ ನಮ್ಮ ಬೀಜ ಮಾರಾಟವಾಗುವುದಿಲ್ಲ. ಬೇರೆ ಖಾಸಗಿ ಏಜೆಂಟ್‌ಗಳು ಪೋಸ ಮಾಡಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಇದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಶ್ರೀ ಬಿ. ಎಲ್. ಗೌಡ.—ಮಾಲಿ ರಾಜ್ಯದಲ್ಲಿರುವಂಥ ಬೀಜ ನಿಗಮ ಮತ್ತು ಕೃಷಿ ಕೈಗಾರಿಕಾ ನಿಗಮಗಳಂತೆ ನಮ್ಮ ರಾಜ್ಯಕ್ಕೆ ಬೇಕಾಗಿರುವ ಬೀಜಗಳಲ್ಲಿ ಶೇಕಡ ೨೦ರಿಂದ ೩೦ರಷ್ಟು ಮಾತ್ರ ಸರಬರಾಜು ಮಾಡುವುದಕ್ಕೆ ಸಾಧ್ಯವಾಗಿದೆ. ಪೂರ್ತಿ ಸರಬರಾಜು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಬೇರೆ ರಾಜ್ಯಗಳಿಂದಲೂ ನಮ್ಮ ರಾಜ್ಯಕ್ಕೆ ಬೀಜ ಬರುವುದಕ್ಕೆ ಅವಕಾಶ ಮಾಡಿ ಕೊಟ್ಟಿಲ್ಲ. ಒಟ್ಟಿನಲ್ಲಿ ರೈತರ ಬೇಡಿಕೆಯನ್ನು ಪೂರೈಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಆರ್. ಪಾಟೀಲ್.—ಈಗ ಮಾರಾಟವಾಗುತ್ತಿರುವ ಬೀಜದ ಬೆಲೆ ಸರ್ಕಾರದ ನ್ಯಾಯ ಬೆಲೆ ಆಗಿದೆಯೆ? ಹಾಗಿಲ್ಲದಿದ್ದರೆ ಅದನ್ನು ಕಡಿಮೆ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೆ?

ಶ್ರೀ ಬಿ. ಎಲ್. ಗೌಡ.—ಈಗ ಮಾರಾಟ ಮಾಡತಕ್ಕ ಬೀಜದ ಬೆಲೆ ರಾಜ್ಯದ ಕೆಲವು ಕಡೆಗಳಲ್ಲಿ ಕಡಿಮೆ ಇದೆ. ಅಂಧ್ರ ಪ್ರದೇಶಕ್ಕೂ ಕಡಿಮೆ ಇದೆ. ಕೆಲವು ಕಡೆ ಮಾತ್ರ ಜಾಸ್ತಿ ಇದೆ. ನಾವು ಮಾರಾಟ ಮಾಡುವ ಎಲ್ಲ ಕಡೆಗಳಲ್ಲಿ ಕಡಿಮೆ ಇದೆ.

ಶ್ರೀ ಬಿ. ಆರ್. ಯಾವಗಲ್.—೧೯೫೬-೫೭ರಲ್ಲಿ ಹತ್ತಿ ಬೀಜ ಕೊರತೆ ಬಂದು ರೈತರು ತೊಂದರೆಗೆ ಒಳಗಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ? ಆ ಅವಧಿಯಲ್ಲಿ ಒಂದು ಕೆ.ಜಿ. ಹತ್ತಿ ಕಾಳಿಗೆ ೫೦ ರೂಪಾಯಿಗಳಿಗಿಂತ ಜಾಸ್ತಿ ಕೊಟ್ಟು ತೆಗೆದುಕೊಂಡು ಹಾಕಿ ಪೋಸ ಹೋಗಿ ಬೆಳೆ ಎಲ್ಲ ನಾಶವಾದ ಪರಿಸ್ಥಿತಿಯಾದರಿಂದ ಸರ್ಕಾರ ಯಾವ ರೀತಿ ಅವರಿಗೆ ಬೀಜ ಒದಗಿಸುವ ವ್ಯವಸ್ಥೆ ಮಾಡಿತ್ತು ಮತ್ತು ಈ ವರ್ಷ ಏನು ಕಾರ್ಯಕ್ರಮ ಹಾಕಿಕೊಂಡಿದೆ?

ಶ್ರೀ ಬಿ. ಎಲ್. ಗೌಡ.—ಹೋದ ವರ್ಷ ಆದದ್ದು ಸರ್ಕಾರದ ಗಮನಕ್ಕೆ ಬಂದ ಮೇಲೆ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ ಮತ್ತು ಮುಂದಿನ ವರ್ಷ ಆ ರೀತಿ ಆಗಬಾರದೆಂದು ಅದಕ್ಕೆ ತಕ್ಕ ಏರ್ಪಾಡು ಮಾಡಿದ್ದೇವೆ.

ಶ್ರೀ ಎಫ್. ಎ. ಕೊಪ್ಪದ್.—ಬೀಜದ ಬೆಲೆ ಕ್ವಿಂಟಾಲಿಗೆ ೨೯೦ ರೂಪಾಯಿ ಇದ್ದದ್ದು ಮೊನ್ನೆ ನಮ್ಮ ರೈತರು ತೆಗೆದುಕೊಳ್ಳುವಾಗ ೪೮೦ ರೂಪಾಯಿ ಆಗಿದೆ. ಎಲ್ಲ ಬೀಜಗಳ ಬೆಲೆಯೂ ಹಾಗೇ ಆಗಿದೆ. ಈ ರೀತಿ ಒಂದಕ್ಕೆ ಎರಡರಷ್ಟು ಬೆಲೆ ಆಗಲು ಕಾರಣವೇನು ?

ಶ್ರೀ ಬಿ.ಎಲ್. ಗೌಡ.—ಆ ತರಹ ಏನು ಹೆಚ್ಚಾಗಿಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸರ್ಕಾರದಲ್ಲಿರತಕ್ಕ ಸೀಡ್ ಕಾರ್ಪೊರೇಷನ್ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡದೆ ಹೆಚ್ಚಿಗೆ ಬೀಜ ಉತ್ಪಾದನೆ ಮಾಡದೆ ಇರುವುದು ಬೆಲೆ ಹೆಚ್ಚಾಗುವುದಕ್ಕೆ ಮೂಲ ಕಾರಣವೆಂದು ತಿಳಿದು ಬಂದಿದೆ. ಮತ್ತು ಅವರ ಮೇಲೆ ತನಿಖೆ ನಡೆಸಿ ಅವರನ್ನು ಬದಲಾಯಿಸಬೇಕೆಂಬ ವಿಚಾರ ಸರ್ಕಾರದ ಯೋಚನೆಯಲ್ಲಿದೆ ಎಂದು ಗೊತ್ತಾಗಿದೆ. ಆದ್ದರಿಂದ, ಜಾಗ್ರತೆ ಅವರ ಮೇಲೆ ಕ್ರಮ ತೆಗೆದುಕೊಂಡು ಅವರನ್ನು ಹೋಂ ಡಿಪಾರ್ಟ್‌ಮೆಂಟಿಗೆ ಕಳುಹಿಸಿ ಬೇರೆ ಅಧಿಕಾರಿಗಳನ್ನು ನೇಮಿಸಿ ಸೀಡ್ ಕಾರ್ಪೊರೇಷನ್ ದಕ್ಷತೆಯಿಂದ ಕೆಲಸ ಮಾಡುವುದಕ್ಕೆ ಮಂತ್ರಿಗಳು ಕ್ರಮ ತೆಗೆದುಕೊಳ್ಳುವರೆ ?

ಶ್ರೀ ಬಿ. ಎಲ್. ಗೌಡ.—ಆ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆ ಮತ್ತು ವಿಚಾರಣೆ ಕೂಡ ನಡೆಯುತ್ತಿದೆ, ಆದರೆ ಇನ್ನೂ ಅದರ ಬಗ್ಗೆ ಪರದಿ ಬಂದಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸರಿಯಾದ ವೇಳೆಗೆ ಬೀಜವನ್ನು ಒದಗಿಸದೆ ಇರತಕ್ಕ ವಿಷಯ ವಂಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಗೊತ್ತು. ನಾನು ಕೇಳುವುದು ಇಷ್ಟೆ, ನಮ್ಮ ರಾಜ್ಯದಲ್ಲಿ ಯಾವ ಯಾವ ಬೀಜಗಳನ್ನು ಯಾವ ಯಾವ ಭಾಗಗಳಲ್ಲಿ ರೈತರು ಬೆಳೆಯುತ್ತಾರೆಂಬ ಅಂಕಿ ಅಂಶಗಳು ಇವೆಯೆ ? ಹಾಗೆ ಇದ್ದರೆ, ಮುಂಜಾಗರೂಕತಾ ಕ್ರಮವಾಗಿ ಬೀಜಗಳ ಸಂಗ್ರಹಣೆ ಬಗ್ಗೆ ಕ್ರಮ ತೆಗೆದುಕೊಂಡಿದೆಯೇ ?

ಶ್ರೀ ಬಿ. ಎಲ್. ಗೌಡ.—ಸ್ವಾಮಿ, ಇದಕ್ಕೆ ನನ್ನ ಹತ್ತಿರ ಈಗ ಉತ್ತರ ಇಲ್ಲ. ಬೇರೆ ಪ್ರಶ್ನೆ ಕೇಳಿದರೆ ಉತ್ತರ ಒದಗಿಸಿಕೊಡುಬಹುದು. ಸರ್ಕಾರದ ಪರವಾಗಿ ಬೀಜ ನಿಗಮದ ಮೂಲಕ ಮುಂದಿನ ವರ್ಷಕ್ಕೆ ಬೇಕಾದ ಪೂರ್ತಿ ಬೀಜಗಳನ್ನು ಒದಗಿಸುವುದಕ್ಕೆ ಎಲ್ಲ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸೀಡ್ಸ್ ಕಾರ್ಪೊರೇಷನ್ ಮ್ಯಾನೇಜಿಂಗ್ ಡೈರೆಕ್ಟರ್‌ರವರು ಅವರ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡಿರುವುದರಿಂದ ಅವರ ವಿರುದ್ಧ ತನಿಖೆ ನಡೆಯುತ್ತಿದೆ ಎಂದು ಮಾನ್ಯ ತಿಮ್ಮೇಗೌಡರು ಕೇಳಿದ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಯಾರು ತಮ್ಮ ಹುದ್ದೆಯನ್ನ ದುರುಪಯೋಗಪಡಿಸಿಕೊಂಡಿದ್ದಾರೋ ಅವರನ್ನು ಅದೇ ಹುದ್ದೆಯಲ್ಲಿಟ್ಟು ತನಿಖೆ ನಡೆಸಿದರೆ ಸರಿಯಾದ ತನಿಖೆ ಆಗುವುದಕ್ಕೆ ಸಾಧ್ಯವಿದೆಯೆ ? ಸಿ.ಓ.ಡಿ. ತನಿಖೆಗೆ ಸರ್ಕಾರ ಆಜ್ಞೆ ಮಾಡಿದೆ ಎಂದು ಗೊತ್ತಾಗಿದೆ. ಯಾರ ಮೇಲೆ ಆಪಾದನೆ ಇದೆಯೋ ಅವರನ್ನು ಅದೇ ಹುದ್ದೆಯಲ್ಲಿ ಕಂಟಿನ್ಯೂ ಮಾಡಿ ತನಿಖೆ ನಡೆಸಿದರೆ ಅದು ಸರಿಯಾದ ವಿಚಾರಣೆಯಾಗುವುದಿಲ್ಲ. ಆದ್ದರಿಂದ ಮಾನ್ಯ ತಿಮ್ಮೇಗೌಡರು ಹೇಳಿದಹಾಗೆ ತಕ್ಷಣ ಆ ಅಧಿಕಾರಿಯನ್ನು ಬದಲಾಯಿಸಿ ತನಿಖೆಯನ್ನು ಮುಂದುವರಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಲ್. ಗೌಡ.—ಒಬ್ಬರ ಮೇಲೆ ಆಪಾದನೆ ಬಂದ ತಕ್ಷಣ ನಾವು ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈಗ ಸಿ.ಓ.ಡಿ ಗೆ ರೆಫರ್ ಮಾಡಿದ್ದೇವೆ. ಅವರ ಮೇಲೆ ಪ್ರೇಮಾಫೇಸಿ ಕೇಸ್ ಇದೆ ಎಂದು ಕಂಡುಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಪಿ. ಒಡೆಯರಾಜ್ —ಯಾರ ಮೇಲೆ ಆಪಾದನೆ ಇದೆಯೋ ಅವರನ್ನು ಆ ಜಾಗದಲ್ಲೇ ಇರಿಸಿದರೆ ಸರ್ಕಾರವೂ ಅವರ ಜೊತೆಯಲ್ಲಿ ಶಾಮೀಲಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಮಿತಕ್ಕೆ ಸಾಧ್ಯವಿಲ್ಲ. ಇದರಿಂದ ನೀವು ರಕ್ಷಣೆ ಕೊಡುತ್ತಿದ್ದೀರಿ ಎಂಬ ಭಾವನೆ ಬರುವುದಿಲ್ಲವೆ ? ಈ ರೀತಿ ಪರಿಸ್ಥಿತಿ ಇರುವಾಗ ಸಿ.ಓ.ಡಿ. ಯವರು ಯಾವರೀತಿ ತನಿಖೆ ಮಾಡುತ್ತಾರೆ ?

ಶ್ರೀ ಬಿ. ಎಲ್. ಗೌಡ.—ಪ್ರತಿಯೊಬ್ಬರ ಮೇಲೂ ಆಪಾದನೆ ಬಂದ ತಕ್ಷಣ ಕ್ರಮ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಸರಿಯಾದ ತನಿಖೆಯಾಗುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಇಲ್ಲದಿದ್ದರೆ ಸರ್ಕಾರದವರೂ ಶಾಮೀಲಾಗಿದ್ದಾರೆ ಎಂದು ಆಪಾದನೆ ಮಾಡಬೇಕಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ಸರ್ಕಾರ ಶಾಮೀಲಾಗಿಲ್ಲ.

ಶ್ರೀ ಗೋವಿಂದ ಪಿ. ಒಡೆಯರಾಜ್.—ಹಾಗಾದರೆ ನಿಮಗೆ ತಾಕತ್ತಿಲ್ಲ ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ. ಆರ್. ಪಾಟೀಲ್.—ನಮ್ಮ ಕಡೆ ಜೋಳ, ತೊಗರಿ, ಹತ್ತಿ, ಶೇಂಗಾ ಮತ್ತು ಗೋಧಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಈ ಬೀಜಗಳ ಬೆಲೆ ವಿಶೇಷವಾಗಿ ಜಾಸ್ತಿ ಇದೆ. ಸಾಮಾನ್ಯವಾಗಿ ಬೀಜದ ಬೆಲೆ ಜಾಸ್ತಿ ಎಂದ ತಕ್ಷಣ ಸರ್ಕಾರದ ಗಮನಕ್ಕೆ ಬರುವುದು ಭತ್ತದ ವಿಚಾರ ಮಾತ್ರ. ನಮ್ಮ ಕಡೆ ಬೆಳೆಯುವ ಆಹಾರ ಧಾನ್ಯಗಳ ಬೀಜದ ವಿಷಯ ಸರ್ಕಾರದ ಗಮನಕ್ಕೆ ಬರುವುದಿಲ್ಲ. ಹತ್ತಿ, ಶೇಂಗಾ ಮತ್ತು ಗೋಧಿ ಈ ಬೆಳೆಗಳ ಬಿತ್ತನೆ ಬೀಜದ ಬೆಲೆ ನಮ್ಮಲ್ಲಿ ಎಷ್ಟಿದೆ, ಆಂಧ್ರ ಮಂತ್ತು ಮಹಾರಾಷ್ಟ್ರದಲ್ಲಿ ಎಷ್ಟಿದೆ ಎಂಬ ಬಗ್ಗೆ ಹೋಲಿಕೆ ಮಾಡಿ ಹೇಳುವುದಕ್ಕಾಗುತ್ತದೆಯೆ ?

ಶ್ರೀ ಬಿ. ಎಲ್. ಗೌಡ.—ನಮ್ಮಲ್ಲೇ ಹೆಚ್ಚಿಗೆ ಬೆಳೆದು ಹಂಚುವ ವ್ಯವಸ್ಥೆ ಮಾಡುತ್ತಿದ್ದೇವೆ. ಮಹಾರಾಷ್ಟ್ರದಲ್ಲಿ ಎಷ್ಟಿದೆ ಎಂಬ ಅಂಕಿ ಅಂಶವನ್ನು ಪಡೆಯಲಂ ಪ್ರಯತ್ನ ಪಟ್ಟರೂ ಸಿಗಲಿಲ್ಲ. ಸಧ್ಯಕ್ಕೆ ಆ ಮಾಹಿತಿ ಇಲ್ಲ.

ಬೇವೂರು ಗ್ರಾಮದಲ್ಲಿ ಸರ್ಕಾರಿ ಗ್ರಂಥಾಲಯ ತೆಗೆಯಂವ ಬಗ್ಗೆ.

೧೪೨ ಶ್ರೀ ಮಲ್ಲಿಕಾರ್ಜುನ ಬನ್ನಿ (ಗುಳೇದಗುಡ್ಡ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಗುಳೇದಗುಡ್ಡ ಕ್ಷೇತ್ರದ ಬಾಗಲಕೋಟೆ ತಾಲ್ಲೂಕಿನ ಬೇವೂರ ಗ್ರಾಮಕ್ಕೆ ಸರ್ಕಾರಿ ಗ್ರಂಥಾಲಯ ಮಂಜೂರು ಆದರೂ ಆ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರಿ ಗ್ರಂಥಾಲಯವನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಬಿಜಾಪುರ ಜಿಲ್ಲಾ ಪ್ರಾಧಿಕಾರದ ೧೩ನೇ ಸಭೆಯು ದಿನಾಂಕ ೪ ಡಿಸೆಂಬರ್ ೧೯೬೨ ರಂದು ಬೇವೂರು ಗ್ರಾಮಕ್ಕೆ ಗ್ರಂಥಾಲಯ ತೆರೆಯಲು ಠರಾವು ಮಾಡಿದೆ.

ಆ) ಆದಷ್ಟು ಬೇಗ ಗ್ರಂಥಾಲಯ ಪ್ರಾರಂಭ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಬನ್ನಿ.—ಮಾನ್ಯ ಅಧ್ಯಕ್ಷರೆ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳಂ ಮಾತನಾಡುವಾಗ ಕನ್ನಡಕ್ಕೋಸ್ಕರ ತಮ್ಮ ಪಕ್ಷದ ಸದಸ್ಯರು ಪ್ರಾಣ ಕೊಡಲಿಕ್ಕೂ ಸಿದ್ಧರಿದ್ದಾರೆ ಎಂದು ಹೇಳಿದರು. ಆದರೆ ಇಲ್ಲಿ ನನ್ನ ಪ್ರಶ್ನೆಗೆ ಉತ್ತರ ಇಂಗ್ಲೀಷಿನಲ್ಲಿ ಬಂದಿದೆ ಆದರೂ ನಾನಂ ಕನ್ನಡದಲ್ಲಿ ಪ್ರಶ್ನೆ ಕೇಳುತ್ತಿದ್ದೇನೆ.

ಬೇವೂರು ಗ್ರಾಮದಲ್ಲಿ ಗ್ರಂಥಾಲಯ ತೆರೆಯಬೇಕೆಂದು ೧೯೬೨ರಲ್ಲೇ ಠರಾವು ಮಾಡಿದ್ದರೂ ಇನ್ನೂ ಪ್ರಾರಂಭವಾಗಿಲ್ಲ. ಅಲ್ಲಿ ಗ್ರಂಥಾಲಯವನ್ನು ಪ್ರಾರಂಭ ಮಾಡಬೇಕಾದರೆ ಸರ್ಕಾರಕ್ಕೆ ಇನ್ನೂ ಎಷ್ಟು ವರ್ಷಗಳು ಬೇಕಂ ?

ಶ್ರೀ ಬಿ. ರಾಚಯ್ಯ.—ಆಯಾ ಜಿಲ್ಲಾ ಪ್ರಾಧಿಕಾರದವರು ಎಲ್ಲೆಲ್ಲಿ ಗ್ರಂಥಾಲಯಂಗಳು ಬೇಕೋ ಅಲ್ಲಿ ಗ್ರಂಥಾಲಯಂಗಳನ್ನು ತೆರೆಯುವುದಕ್ಕೆ ಅವಕಾಶ ಇದೆ. ಅದಕ್ಕೆ ಬೇಕಾದ ಜಾಗ, ಕಟ್ಟಡ, ಪೀಠೋಪಕರಣಗಳು, ಪುಸ್ತಕಗಳು ಮಂತ್ತು ವಿಯತಕಾಲಿಕೆಗಳನ್ನು ಪ್ರಾಧಿಕಾರದವರೇ ಒದಗಿಸಿ ಕೊಳ್ಳುವುದಕ್ಕೆ ಅವಕಾಶವಿದೆ. ಸರ್ಕಾರದಿಂದ ಗ್ರಂಥಾಲಯಾಧಿಕಾರಿಯನ್ನೂ ಕೊಡಬಹಂದು. ಆಯಾ